ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಶ್ರೀರಂಗ ಏತ ನೀರಾವರಿ ಯೋಜನೆಯ ಬಗ್ಗೆ

ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) –

545 (653) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶ್ರೀರಂಗ ಏತ ನೀರಾವರಿ ಯೋಜನೆ ಜಾರಿಗೆ ರಾಜ್ಯ ಸರ್ಕಾರ ಇಲ್ಲಯವರೆಗೂ ಯಾವ ಕ್ರಮಗಳನ್ನು ಕೈಗೊಂಡಿದೆ;

(ಆ) ಶ್ರೀರಂಗ ಯೋಜನೆಯಿಂದ ರಾಮನಗರ ಜಿಲ್ಲೆಯ ಮಾಗಡಿ ಮತ್ತು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕುಗಳ ಎಷ್ಟು ಕೆರೆಗಳಿಗೆ ಅನುಕೂಲವಾಗಲಿದೆ; (ವಿವರ ನೀಡುವುದು)

(ಇ) ಈ ಯೋಜನೆಗೆ ನಿಗದಿಪಡಿಸಿರುವ ಪರಿಷ್ಕೃತ ಹಣವೆಷ್ಟು; ಈಗಾಗಲೇ ಈ ಯೋಜನೆಗೆ ಬಿಡುಗಡೆಯಾಗಿ ಖರ್ಚಾಗಿರುವ ಹಣವೆಷ್ಟು;

(ಈ) ಈ ಯೋಜನೆಯ ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಲಾದ ಸಮಯ ಎಷ್ಟು;

(ಉ) ಈ ಯೋಜನೆಗೆ ಒಟ್ಟು ಭೂಸ್ವಾಧೀನ ಪ್ರದೇಶ ಎಷ್ಟು; ಹಾಗೂ ಭೂಸ್ವಾಧಿನ ಪ್ರಕ್ರಿಯೆ ಪೂರ್ಣಗೊಂಡಿದೆಯೇ? ಇಲ್ಲವಾದಲ್ಲಿ ಕಾರಣಗಳೇನು;

(ಊ) ಈ ಯೋಜನೆಯಿಂದ ಒಟ್ಟು ಎಷ್ಟು ಕ್ಯೂಸೆಕ್ಸ್ ನೀರು ಹರಿಸಲಾಗುವುದು?